ಐಎಎಸ್ ಅಧಿಕಾರಿಗಳ ಕನ್ನಡ ತರಬೇತಿಯ ಬಗ್ಗೆ

೫೩. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ. ರಾಜ್ಯದ ಒಟ್ಟು ಐಎಎಸ್ ಅಧಿಕಾರಿಗಳಲ್ಲಿ ಹೊರ ರಾಜ್ಯದಿಂದ ಬಂದಿರುವವರ ಸಂಖ್ಯೆ ಎಷ್ಟು ?

ಆ. ಹಾಗಿದ್ದಲ್ಲಿ ಇವರಿಗೆ ಕನ್ನಡ ಭಾಷಾ ತರಬೇತಿ ನೀಡಲಾಗಿದೆಯೆ?

ಇ. ಸರಕಾರ ಕನ್ನಡ ಭಾಷೆಯನ್ನು ಆಡಳಿತದಲ್ಲಿ ಅಧಿಕೃತ ಭಾಷೆಯನ್ನಾಗಿ ಯಾವಾಗ ಘೋಷಿಸಲಾಯಿತು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ. ೧೧೭

ಆ. ಹೌದು

ಇ. ದಿನಾಂಕ ೧೦-೧೦-೧೯೬೩ರಂದು

ಬಿಜಾಪುರ ಜಿಲ್ಲೆಯಲ್ಲಿ ಶಾಶ್ವತ ಪರಿಹಾರದ ಬಗ್ಗೆ

೯೫೮. ಶ್ರೀ ಶಿವಸಂಗಪ್ಪ ಕಡಪಟ್ಟಿ (ಹುನಗುಂದ).— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ. ಗಂಡ್ಡಗಾಡು ಪ್ರದೇಶಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹೆಚ್ಚಿನ ನೆರವು ನೀಡುವಂತೆ ೧೩ನೆಯ ಶತಮಾನದಿಂದಲೂ ಬರಗಾಲಕ್ಕೆ ತುತ್ತಾಗುತ್ತಾ ಬಂದ ವಿಜಾಪುರ ಜಿಲ್ಲೆಯ ಶಾಶ್ವತ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದವರನ್ನು ನೆರವು ಕೋರಲಾಗಿದೆಯೇ ?

ಆ. ಹಾಗಿದ್ದಲ್ಲಿ ಯಾವಾಗ್ಗೆ ಎಷ್ಟು ನೆರವು ಕೇಳಲಾಗಿದೆ? ಈಗ ಎಷ್ಟು ಬಂದಿದೆ?

ಇ. ಈವರೆಗೂ ಈ ರೀತಿ ವಿಶೇಷ ನೆರವು ಕೇಳಿರದಿದ್ದರೆ ಇನ್ನಾದರೂ ವಿಜಾಪುರ ಜಿಲ್ಲೆಯ ನಾಲ್ಕು ನದಿಗಳ ಸಂಪೂರ್ಣ ಬಳಕೆಗೆ ಏತ ನೀರಾವರಿ ಹಾಗೂ ಭಾಂಧಾರ ಬಗ್ಗೆ ಪ್ರತಿವರ್ಷ ಕನಿಷ್ಟ ರೂಪಾಯಿ ಒಂದು ನೂರು ಕೋಟಿಯಂತೆ ಹತ್ತು ವರ್ಷ ನೆರವು ಪಡೆದು ಜಿಲ್ಲೆಯ ಭವಣೆಯನ್ನು ದೂರ ಮಾಡಲಾಗುವುದೇ ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ. ಮಾಸ್ಟರ್ ಪ್ಲಾನ್ ತಯಾರು ಮಾಡಲು ಕ್ರಮಗಳನ್ನು ತೆಗೆದುಕೊಂಡಿದೆ.

ಆ. ಉದ್ಭವಿಸುವುದಿಲ್ಲ.

ಇ. ಈ ಸಲಹೆಯನ್ನು ಪರಿಗಣಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಪ್ರವಾಹ ನಿಯಂತ್ರಣ ಕಾರ್ಯಕ್ರಮದ ಬಗ್ಗೆ

೫೧೦. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬೈಂದೂರು ಮತದಾರ ಕ್ಷೇತ್ರಕ್ಕೆ ಸೇರಿದ ಕನ್ನಡ—ಹುದುರು, ಉಪ್ಪಿನ ಹುದುರು ದ್ವೀಪಗಳ ಸುತ್ತ, ನಾವ್ಯ ಗ್ರಾಮದ ಆರೆಹೊಳೆ ದೇವಸ್ಥಾನದ ಬಳಿ, ಹೇರೂರು ಗ್ರಾಮದ ರಾಗಿಹಕ್ಕು ಬಳಿ ಕಿರಿಯಂಜೇಶ್ವರ ಗ್ರಾಮದ ಕೊಡೇರಿ ಶಾಲೆ ಬಳಿ ಪ್ರತಿವರ್ಷ ನದಿ ಪ್ರವಾಹದಿಂದ ಭೂಮಿಯು ಕೊರತೆ ಉಂಟಾಗು